ಸಾಕ್ಷಿದಾರರಿಗೆ ದಿನಾಂಕಃ 7.06.2017 ರಂದು ಕರೆಯಿಸಿ ಪ್ರಮಾಣ ವಚನ ಕೊಡಿಸಲಾಯಿತು.

**ಪಾಟೀಸವಾಲು ವಾದಿಯಪರ ವಕೀಲರಿಂದಃ-**

3. ಸದರಿ ದಾವಾ ಆಸ್ತಿಯನ್ನು ಹೊರತುಪಡಿಸಿ ನಮ್ಮ ಮನೆತನಕ್ಕೆ ಬೇರೆ ಆಸ್ತಿ ಯಾವುದು ಇಲ್ಲ. ನಾವು ಒಕ್ಕುಲುತನ ಹೊರುತುಪಡಿಸಿ ಬೇರೆ ಯಾವುದೇ ಉದ್ಯೋಗ ಮಾಡುತ್ತಿಲ್ಲ. ನಮ್ಮ ಮನೆತನಕ್ಕೆ ಆದಾಯ ಈ ದಾವಾ ಆಸ್ತಿಯಿಂದ ಮಾತ್ರ ಎಂದರೆ ಹೌದು. ಸಿ.ಕೆ ಜಾಧವ ಎಂಬುವವರು ನಮ್ಮ ಮನೆಯವರಿಗೆ ಮೊದಲಿನಿಂದ ಪರಿಚಯ ಆದರೆ ನನಗೆ ಪರಿಚಯ ಇಲ್ಲ. ನನ್ನ ಗಂಡ ಮರಣ ಹೊಂದಿ ಈಗ 9 ವರ್ಷವಾಯಿತು. ಪ್ರತಿವಾದಿ 2 ಮತ್ತು 3 ಯಾವುದೇ ಉದ್ಯೋಗ ಮಾಡುತ್ತಿಲ್ಲ. 5ನೇ ಪ್ರತಿವಾದಿಯ ಮದುವೆಯನ್ನು ನನ್ನ ಗಂಡ ಇರುವಾಗಲೇ ಮಾಡಿರುತ್ತದೆ. ಆಕೆಯ ಮದುವೆ ಆಗಿ 10 ವರ್ಷವಾಯಿತು. ನನ್ನ ಗಂಡ ಸಹ ಹೊಲ ಮನೆ ಕೆಲಸ ಮಾತ್ರ ಮಾಡುತ್ತಿದ್ದ ಬೇರೆ ಕೆಲಸವನ್ನು ಮಾಡುತ್ತಿರಲಿಲ್ಲ. ಸದರಿ ನನ್ನ ಮಗಳ ಮದುವೆಗೆಂದು ನಮ್ಮ ಮನೆಯವರು ಸಾಲ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ನಮ್ಮ ಜಮೀನಿಂದ ವರ್ಷಕ್ಕೆ ನಮಗೆ 30 ರಿಂದ 35 ಸಾವಿರ ರೂಪಾಯಿ ಆದಾಯ ಉಳಿಯುತ್ತಿತ್ತು. ನಮ್ಮ ಜಮೀನಿಂದ ಬಂದಂತಹ ಆದಾಯ ನಮ್ಮ ಕುಟುಂಬಕ್ಕೆ ಸಾಕಾಗುತ್ತಿರಲಿಲ್ಲ ಎಂದರೆ ಸರಿಯಲ್ಲ ಸಾಕಾಗುತ್ತಿತ್ತು ದನಕರ ಸಹ ಇದ್ದವು. 5ನೇ ಪ್ರತಿವಾದಿಯ ಮದುವೆಯನ್ನು ನನ್ನ ಗಂಡನೇ ಮಾಡಿದ್ದು ಸುಮಾರು 50 ಸಾವಿರ ರೂಪಾಯಿ ಖರ್ಚು ಆಗಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ.

4. ಸದರಿ ನಿ.ಪಿ.7ರ ಮೇಲೆ ಇರುವಂತಹ ಹೆಬ್ಬೆಟ್ಟಿನ ಸಹಿ ನನ್ನದೆ ಆದರೆ ಖರೀದಿ ಪತ್ರ ಎಂದು ನಾನು ಬರೆದು ಕೊಟ್ಟಿಲ್ಲ. ಸದರಿ ನಿ.ಪಿ.7ಕ್ಕೆ ಹೆಬ್ಬೆಟ್ಟಿನ ಗುರುತು ಹಾಕುವಾಗ ಸಿ.ಕೆ ಜಾಧವ ಎಂಬುವವರು ಸಹ ಇದ್ದರು. ಸದರಿ ಸಿ.ಕೆ. ಜಾಧವ ಎಂಬುವವರು ನಮ್ಮ ಮನೆತನದ ಆಸ್ತಿಯಲ್ಲಿ ವಿಭಾಗವಾಗುವಾಗ ಮತ್ತು ಎಲ್ಲಾ ವ್ಯವಹಾರಕ್ಕೂ ಆತ ಹಾಜರಿರುತ್ತಿದ್ದ ಎಂದರೆ ಹೌದು. ಸದರಿ ನಿ.ಪಿ.1ರ ಪ್ರಕಾರ 5 ಲಕ್ಷ

ರೂಪಾಯಿ ನಾವು ಪಡೆದಿದ್ದೇವೆ ಎಂದರೆ ಅದು ನನಗೆ ಗೊತ್ತಿಲ್ಲ ಆದರೆ ದಾಖಲೆಯಾಗುವಾಗ ಸಿಕೆ ಜಾಧವ ಇದ್ದರು ಮತ್ತು ಯಾವುದೇ ಖರೀದಿ ವ್ಯವಹಾರವಾಗಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿ.ಪಿ.1ರ ಮೇಲೆ ಇರುವಂತಹ ಹೆಬ್ಬೆಟ್ಟಿನ ಗುರುತು ನನ್ನದು. ಸದರಿ ನಿ.ಪಿ.1ಕ್ಕೆ ಚಂದ್ರಕಾಂತ ಇಂಡಿಭಾಗ ಜಾಧವ, ಈಶ್ವರ ಜಿ. ಬೆಂಡಿಗೇರಿ ಸಹಿ ಮಾಡಿದ್ದಾರೆ ಎಂದರೆ ಹೌದು. ಸದರಿ ನಿ.ಪಿ.7ರಲ್ಲಿ ನನ್ನ ಮಕ್ಕಳ ವಿಧ್ಯಾಭ್ಯಾಸದ ಸಲುವಾಗಿ ಮತ್ತು ನನ್ನ ಮಗಳ ಮದುವೆ ಖರ್ಚಿನ ಸಂಬಂಧ ಈ ಆಸ್ತಿಯನ್ನು ಮಾರಾಟ ಮಾಡಿದ್ದೇನೆ ಎಂದು ಅದರಲ್ಲಿ ಬರೆದಿದ್ದೇನೆ ಎಂದರೆ ಸರಿಯಲ್ಲ ನಾವು ಮಾರಾಟ ಮಾಡಿಲ್ಲ ಎಂದು ಸಾಕ್ಷಿ ಪುನರುಚ್ಚರಿಸುತ್ತಾರೆ. ಸದರಿ ನನ್ನ ಅಲ್ಪವಯಿ ಮಕ್ಕಳ ಪರವಾಗಿ ಸಹ ಆಸ್ತಿಯನ್ನು ಮಾರಾಟ ಮಾಡಲು ನ್ಯಾಯಾಲಯದಿಂದ ಅನುಮತಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ಆ ಪ್ರಕಾರ ನಾನು ಜಿ.ಆ್ಯಂಡ್.ಡಬ್ಲ್ಯೂ ಅರ್ಜಿಯನ್ನು ಸಹ ನಿ.ಡಿ.1ರ ಪ್ರಕಾರ ಸಲ್ಲಿಸಿದ್ದೆ ಎಂದರೆ ಸರಿಯಲ್ಲ.

5. ಯಾರಾದರೂ ಸಾಲ ಕೊಡುವಾಗ ಆ ಸಾಲವನ್ನು ತೀರಿಸುತ್ತಾನೋ ಇಲ್ಲವೋ ಎಂದು ವಿಚಾರ ಮಾಡಿ ಕೊಡುತ್ತಾರೆ ಎಂದರೆ ಹೌದು. ಸದರಿ ನಾನು ಸಾಲ ಪಡೆದಿದ್ದೇನೆ ಎಂದು ಏನು ಹೇಳುತ್ತಿದ್ದೇನೋ ಅಂತ ಹಣವನ್ನು ತೀರಿಸಲು ನನಗೆ ಬೇರೆ ಯಾವುದೇ ಆದಾಯ ಇಲ್ಲ ಎಂದರೆ ಸರಿಯಲ್ಲ ಮತ್ತು ದಾವಾ ಆಸ್ತಿಯಿಂದ ಅಷ್ಟೊಂದು ಆದಾಯ ಇರಲಿಲ್ಲ ಎಂದರೆ ಸರಿಯಲ್ಲ ಆದರೆ ನನಗೆ ಮೂರನಾಲ್ಕು ಮನೆಯಿಂದ ಬಾಡಿಗೆ ಬರುತ್ತಿತ್ತು ಮತ್ತು ತೆಂಗಿನ ಗಿಡಗಳಿಂದ ಆದಾಯ ಬರುತ್ತಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ನನಗೆ ಸೇರಿದಂತಹ ನಾಲ್ಕು ಮನೆಗಳಿದ್ದವು ಮತ್ತು ಅದರಿಂದ ಬಾಡಿಗೆ ಬರುತ್ತಿತ್ತು ಮತ್ತು ತೆಂಗಿನ ಗಿಡಗಳಿಂದ ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದು ಆ ರೀತಿಯ ಆದಾಯ ನನಗೆ ಇರಲಿಲ್ಲ ಎಂದರೆ ಸರಿಯಲ್ಲ.

**ಹೆಚ್ಚಿನ ಪಾಟೀಸವಾಲಿಗೆ ವೇಳೆ ಕೇಳಲಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೆ ಕೆ ಸರಿ ಅದೆ, ನನ್ನ ಸಮಕ್ಷಮ,

2ನೇ ಹೆಚ್ಚುವರಿ ಹಿ. ದಿ. ನ್ಯಾಯಾಧೀಶರು,

ಹುಬ್ಬಳ್ಳಿ.